## ಪ್ರೇಮದ ಭಾಷೆ

ಬಸುಧಾ ಕೀ ಬಸಕರೀ ಮಧುರತಾ ಸುಧಾಪಗೀ ಬತರಾನಿ //
ಚಢೀ ರಹೆ ಚಿತ್ ಉರ್ ಬಿಸಾಲ್ ಕೋ ಮುಕುತಮಾಲ್ ಥಹರಾನೀ /
ನೃತ್ಯ–ಸಮಯ್ ಪೀತಾಂಬರ್ ಹೂ ಕೀ ಫಹರಿಫಹರಿ ಫಹರಾನೀ //
ಅನುದಿನ್ ಶ್ರೀ ವೃಂದಾವನ್ ಬ್ರಜ್ ತೆ ಆವನ್ಆವನ್ ಜಾನೀ /
ಅಬ್ ರಹೀಮ್ ಚಿತ್ ತೆ ನ ಟರತಿ ಹೈ ಸಕಲ್ ಸ್ಯಾಮ್ ಕೀ ಬಾನೀ //

ಸಖಿ, ಆ ಮೋಹಕ ಕಮಲದಳ–ಕಣ್ಣುಗಳನ್ನು, ಮಂದಹಾಸವನ್ನು, ಮಿಂಚನ್ನೂ ಮೀರುವ
ಆ ದಂತಪಂಕ್ತಿಯ ಹೊಳಹನ್ನು, ಇಡೀ ಭೂಮಿಯ ಸಿಹಿಯಿಂದ ಕೂಡಿರುವ, ಆ ಅಮೃತಸದೃಶ
ಮಾತುಗಳನ್ನು ನಾನು ಮರೆಯಲಾರೆ. ನನ್ನ ಮನಸ್ಸಿನಲ್ಲಿ, ಅವನ ಎದೆಯ ಮೇಲೆ ಓಲಾಡುತ್ತಿರುವ
ಮುತ್ತಿನ ಹಾರ, ಅವನು ನರ್ತಿಸುವಾಗ ಹಾರಾಡುವ ಪೀತಾಂಬರ–ನಿರಿಗೆಗಳು, ಇವುಗಳೇ ತುಂಬಿವೆ.
ಪ್ರತಿ ದಿನವೂ ಅವನು ವೃಂದಾವನದಿಂದ ಹಿಂತಿರುಗುವುದನ್ನು ನಾನು ಕಾಯುತ್ತಿದ್ದೇನೆ.
ಆ ನೀಲಮೇಘಶ್ಯಾಮನ ಚಿತ್ರವು ನನ್ನ ಮನಸ್ಸಿನಿಂದ ಏನಾದರೂ ಮಾಸುವುದಿಲ್ಲ.

### 2. ಅಚ್ಯುತ ಚರನ್ ತರಂಗಿನೀ...

ಓ ತಾಯಿ ಗಂಗಾ,
ನಿನ್ನ ಅಲೆಗಳಿಂದ ಅಚ್ಯುತನ ಕಾಲುಗಳನ್ನು ತೊಳೆಯುತ್ತೀಯೆ, ಶಿವನ ತಲೆಯ ಮೇಲೆ ಮಾಲತಿ
ಪುಷ್ಪದಂತೆ ಶೋಭಿಸುತ್ತೀಯೆ/
ನಾನು ಸುರಲೋಕಕ್ಕೆ ಹೋದಾಗ ನನ್ನನ್ನು ವಿಷ್ಣುವನ್ನಾಗಿ ಮಾಡಬೇಡ, ನಿನ್ನನ್ನು ತಲೆಯ ಮೇಲೆ
ಧರಿಸುವ ಶಿವನನ್ನಾಗಿ ಮಾಡು //

### 3. ಕಮಲಾ ಥಿರ್ ನ ರಹೀಮ್ ಕಹಿ...

ರಹೀಮನು ಹೇಳುತ್ತಾನೆ:
ಕಮಲೆಯು (ಲಕ್ಷ್ಮೀ) ಸ್ಥಿರವಲ್ಲ ಎನ್ನುವುದು ಎಲ್ಲರಿಗೂ ಗೊತ್ತು /
ಅವಳು ಪುರಾತನ ಪುರುಷನ (ವೃದ್ಧನ) ನವ ವಧು, ಚಂಚಲೆಯೇಕಾಗುವುದಿಲ್ಲ! //

4. ಜೊ ರಹೀಮ್ ಕರಿಬೋ ಹುತೋ...

ಓ ಗೋಪಾಲ, ವ್ರಜಭೂಮಿಯನ್ನು ತೊರೆಯಲು ನೀನು ನಿಶ್ಚಯ ಮಾಡಿಯಾಗಿದ್ದರೆ, /
ನೀನೇಕೆ ಗೋವರ್ಧನ ಗಿರಿಯನ್ನು ಬೆರಳಿನಿಂದ ಎತ್ತಿ ಅದನ್ನು ರಕ್ಷಿಸಿದೆ? //

### 5. ಪ್ರೀತಮ್ ಛವಿ ನೈನನ್ ಬಸಿ...

ಪ್ರಿಯತಮನ ಛವಿ ಕಣ್ಣುಗಳಲ್ಲಿದ್ದರೆ, ಬೇರೆ ಯಾವ ಛವಿಯೂ ಅಲ್ಲಿರಲಾಗುವುದಿಲ್ಲ /
ಯಾತ್ರಿಕರಿಂದ ಧರ್ಮಶಾಲೆ ತುಂಬಿದ್ದರೆ, ಆಗಂತುಕರಿಗೆ ಸ್ಥಳವೆಲ್ಲಿರುತ್ತದೆ //

### 6. ಜೋ ರಹೀಮ್ ಭಾವೀ ಕತಹೂ...

ಏನು ಆಗುವುದಿದೆಯೋ ಅದು ಆಗಿಯೇ ತೀರುತ್ತದೆ, ಅದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ; /
ರಾಮನು ಮಾಯಾ ಜಿಂಕೆಯನ್ನು ಬೆನ್ನಟ್ಟಿದನು, ರಾವಣನು ಸೀತೆಯನ್ನು ಅಪಹರಿಸಿದನು. //